ಕಾರ್ಪೊರೇಷನ್ ಮುಖಾಂತರ ತೆಗೆದುಕೊಂಡು 5-6 ಅಥವಾ ನಿರ್ದಿಷ್ಟವಾಗಿ ಇಷ್ಟು ಸೇತುವೆಗಳನ್ನು ಪೂರೈಸಬೇಕೆಂದು ಸರ್ಕಾರದ ಇಚ್ಛೆ ಇದೆ. ಸಭೆಯಲ್ಲಿ ಮಾನ್ಯ ಸದಸ್ಯರಿಗೆ ಹೋದ ಸೆಷನ್‌ನಲ್ಲಿ ತಿಳಿಸಿದ್ದೇನೆ. ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಚಿಕ್ಕ ಚಿಕ್ಕ ಸೇತುವೆಗಳ ಬಗ್ಗೆ ಅದರೂ ಸಾಕಷ್ಟು ಹೆಚ್ಚಿಗೆ ಗಮನಕೊಡದಿದ್ದರೆ ಮಲೆನಾಡಿನಲ್ಲಿ ಇರುವ ಹಳ್ಳಿಗಳಲ್ಲಿ ಹೆಚ್ಚಿಗೆ ಬೆಳೆ ಬೆಳೆಯುವುದಕ್ಕೆ ಮತ್ತು ಸರ್ಕಾರ ಹೆಚ್ಚಿಗೆ ಆಹಾರಧಾನ್ಯ ಒದಗಿಸುವುದಕ್ಕೆ ಆಗುವುದಿಲ್ಲ. ಆ ಬಗ್ಗೆ ಸಾಕಷ್ಟು ಹಣ ಒದಗಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಟಿಗ್ರೇಟೆಡ್ ಪ್ರೋಗ್ರಾಮ್ ಮತ್ತು ರೂರಲ್ ಪ್ರೋಗ್ರಾಮ್ ಹೊರಡಿಸಿ ಇಂಟಿಗ್ರೇಟೆಡ್ ಪ್ರೋಗ್ರಾಂಗಾಗಿ ಮಾಸ್ಟರ್ ಪ್ಲಾನ್ ಮಾಡಬೇಕು ಎಂದು ತಮಗೆ ಈಗಾಗಲೇ ನೆನ್ನೆ ದಿವಸ ಪತ್ರ ಬರೆದಿದ್ದೇನೆ. ನಿಮ್ಮ ಮಾಹಿತಿಗಳು ಬಂದಮೇಲೆ ದೇಶವಲ್ಲಿ ಇಡೀ ರಾಜ್ಯಕ್ಕೆ ಅನುಕೂಲ ಆಗುವ ಹಾಗೆ ಮಾಸ್ಟರ್ ಪ್ಲಾನ್ ತಯಾರುಮಾಡಿ ರಸ್ತೆಗಳು, ಸಿ.ಡಿ. ವರ್ಕ್ಸ್ ಆಗಬೇಕು ಎಂದು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ.

Immovable properties belonging to Thirupathi Sri Amaragiri Venkataramanaswamy

365. Sri H. S. SIDDAPPA (Arsikere).—

Will the Minister for Revenue be pleased to state :—

(*a*) the immovable properties held in the name of Thirupathi Sri Amargiri Venkataramanaswamy in Arasikere Taluk, Kasaba Hobli ;

(*b*) the properties leased out to private parties, the purpose and conditions of lease ;

(*c*) whether the lessee fulfilled the lease conditions ; if not, why not ; the action proposed for fulfilment of the lease conditions ?

Sri N. HUTCHAMASTHY GOWDA (Minister for Revenue).—

(*a*) An extent of 109 Acres 18 guntas of land, one site and a house are endowed in the name of the deity.

(*b*) The lands have been leased out to the private partties subject to the payment of Gutta amount fixed on them.

(*c*) The lessees have fuffilled the lease conditions. So the question of taking action does not arise.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ. ತಾವು ಈ ಪ್ರಶ್ನೆಗೆ ಉತ್ತರವಾಗಿ ಈ ದೇವಸ್ಥಾನಕ್ಕೆ ಸೇರಿದ ಹಾಗೆ ಒಂದು ಸ್ಥೆಟು ಮತ್ತು ಒಂದು ಮನೆ ಇದೆ ಎಂದು ಹೇಳಿದ್ದಿರಿ ಈಗ ಆ ಸ್ಥೆಟು ಮನೆ ಎಲ್ಲಿದೆ ಎನ್ನುವುದನ್ನು ಹೇಳುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ಥೆಟನ್ನು ಸಿನಿಮಾ ಥಿಯೇಟರನ್ನು ಕಟ್ಟುವುದಕ್ಕೋಸ್ಕರ ಶ್ರೀ ಎಂ. ಆರ್. ಪುಟ್ಟಸ್ವಾಮಯ್ಯ ಅನ್ನುವವರಿಗೆ ಕೆಲವು ಷರತ್ತುಗಳನ್ನು ಹಾಕಿ ಕೊಟ್ಟಿದೆ. ಮೊದಲು 30 ವರ್ಷದ ಷರತ್ತು ಹಾಕಿತ್ತು. ಅದಾದಮೇಲೆ ಮತ್ತೆ ವಾಯಿದೆ ಹೆಚ್ಚು ಮಾಡಿದೆ. ಮತ್ತು ಅದರಲ್ಲಿ ಆ ಸ್ಥೆಟನ್ನು ಸ್ವಾಧೀನಕ್ಕೆ ಕೊಟ್ಟ ಮೇಲೆ ಅವರಿಗೆ ತಿಂಗಳು ಒಂದಕ್ಕೆ 60 ರೂಪಾಯಿ ಗ್ರೌಂಡ್ ರೆಂಟ್ ಕೊಡಬೇಕು ಎನ್ನುವ ಷರತ್ತು ಹಾಕಿದೆ. ಇನ್ನೂ ಕೆಲವಾರು ಷರತ್ತುಗಳನ್ನು ಹಾಕಿದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಅಷರತುಗಳ ವಿವರಗಳನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಅಧ್ಯಕ್ಷರ ಅಪ್ಪಣೆ ಆದರೆ ಹೇಳುತ್ತೇನೆ.

ಅಧ್ಯಕ್ಷರು.—ಹೇಳಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಸಿನಿಮಾ ಥಿಯೇಟ್ರಿನವರನ್ನು 85 ಸಾವಿರ ರೂಪಾಯಿ ಖರ್ಚಿನಲ್ಲಿ ಕಟ್ಟಬೇಕೆಂದು ಷರತ್ತು ಹಾಕಿದೆ. ತಾರೀಖು 23-5-1959 ರಲ್ಲಿ ಆ ಸೈಟನ್ನು ಪೊಸಿಷನ್‌ಗೆ ಕೊಟ್ಟತು. ಒಂದು ವರ್ಷ ಕಳೆಯಿತು, ಕಟ್ಟಡ ಪ್ರಾರಂಭವಾಗಲಿಲ್ಲ. ಮತ್ತು ಅವರು ಟೈಂ ಎಕ್ಸ್‌ಟೆಂಡ್ ಮಾಡುವುದಕ್ಕೆ ಅರ್ಜಿ ಕೊಟ್ಟರು 1968 ರವರೆಗೂ ಇನ್ನೂ ಆ ಬಗ್ಗೆ ತೀರ್ಮಾನವಾಗಲಿಲ್ಲ. ಅವಾದ ಮೇಲೆ 2 ವರ್ಷ ಟೈಂ ಎಕ್ಸ್‌ಟೆಂಡ್ ಮಾಡಬೇಕು ಎಂದು ಕೇಳಿದರು. ಒಂದು ವರ್ಷ ಕೊಟ್ಟರು. ಆದಾದಮೆಲೆ 1972 ನೇ ಇಸವಿ ಫೆಬ್ರುವರಿಯಲ್ಲಿ ಇನ್ನು 6 ತಿಂಗಳು ಟೈಂ ಎಕ್ಸ್‌ಟೆಂಡ್ ಮಾಡಬೇಕು ಎಂದು ಅರ್ಜಿ ಕೊಟ್ಟರು ಈಗ ಅದು ರೂಫಿಂಗ್ ಮಟ್ಟಕ್ಕೆ ಬಂದಿದೆ. ಇಷ್ಟರಲ್ಲೆ ಆ ಕೆಲಸ ಆಗ್ಬಹುದು ಎಂದು ನಾನು ತಿಳಿದಿದ್ದೇನೆ.

ಶ್ರೀ ಹೆಚ್. ಎಸ್ ಸಿದ್ದಪ್ಪ.— ಈಗ ತಾವು ಹೇಳಿದಂತೆ 1959ನೇ ಇಸವಿಯಲ್ಲಿ ಆ ಸೈಟನ್ನು ಪೊಸಿಷನ್‌ಗೆ ಕೊಟ್ಟು ಒಂದು ವರ್ಷವಾದರೂ ಕಟ್ಟಡ ಆಗಲಿಲ್ಲ, ಮತ್ತು 1968 ರಲ್ಲಿ ಇನ್ನೂ ಒಂದು ವರ್ಷ ಟೈಂ ಕೊಟ್ಟರೂ ಕಟ್ಟಡ ಆಗಲಿಲ್ಲ, ಪುನ : 1972 ನೇ ಇಸವಿಯಲ್ಲಿ 6 ತಿಂಗಳು ಟೈಂ ಕೇಳಿದರೂ ಕೂಡ ಕಟ್ಟಡ ಆಗಲಿಲ್ಲ ಎಂದು. ಈ ಹೊತ್ತಿನ ದಿವಸ ಆ ದೇವಸ್ಥಾನಕ್ಕೆ ಅದರಿಂದ ಏನು ಲುಕ್ಸಾನು ಆಗಿದೆಯೋ ಅದಕ್ಕೆ ಜವಾಬ್ದಾರರು ಯಾರು ? ಆದರಿಂದ ಲೀಸ್ ಕಂಡೀಷನ್‌ನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೇ ? ಈವಾಗ ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಅವರು ಕಟ್ಟಡ ಕಟ್ಟಬೇಕು ಇದ್ದರೂ ಕೂಡ ತಿಂಗಳು ಒಂದಕ್ಕೆ 60 ರೂಪಾಯಿ ಬಾಡಿಗೆ ಕೊಡಬೇಕು ಎಂದು ಏನು ಷರತ್ತು ಹಾಕಿದ್ದೇವೋ ಅದು ಬರುತ್ತಾ ಬಾಡಿಗೆ ಇದೆ. ಬಾಕಿ ಇಲ್ಲಾ. ಆದುದರಿಂದ ದೇವಸ್ಥಾನಕ್ಕೆ ಏನೂ ನಷ್ಟವಾಗಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ, ಸಿನಿಮಾ ಥಿಯೇಟರ್ ಲೀಸ್‌ನ್ನು 30 ವರ್ಷ ಇದ್ದುದನ್ನು 40 ವರ್ಷಕ್ಕೆ ಹೆಚ್ಚು ಮಾಡಿದ್ದೀರಿ. ಆ ಕಟ್ಟಡವನ್ನು ಇನ್ನು 20 ವರ್ಷಕ್ಕೆ ಕಟ್ಟದರೆ, ಆಲ್ಲಿಂದ 40 ವರ್ಷ ಲೀಸ್‌ಗೆ ಅವರಿಗೆ ಕೊಟ್ಟರೆ ಇದರಿಂದ ಲುಕ್ಸಾನು ಆಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾರೀಖು 28-4-1958 ರಿಂದ 40 ವರ್ಷವಾಗುತ್ತದೆ. ಥಿಯೇಟರ್ ಕಟ್ಟಿದ ಮೇಲೆ ವಾಯಿದೆ ಬರುವುದಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ —ಇದರಲ್ಲಿ ಒಂದು ನಲಹಾ ಮಂಡಲಿ ಇದೆ. ಅವರಿಗೆ ಈ ಬಗ್ಗೆ ಅಗ್ರಿಮೆಂಟ್ ಆದದ್ದು, ಲೀಸ್ ಡೀಡ್ ಆದುದ್ದು ಗೊತ್ತಿಲ್ಲ. ಇದರ ವ್ಯವಹಾರ ನೋಡಿದರೆ ಇಷ್ಟೊಂದು ತಡವಾಗಿದೆ. ಆದುದರಿಂದ ಅಗ್ರಿಮೆಂಟ್‌ನಲ್ಲಿ ಏನು ಇದೆ ? ಲೀಸ್ ಕಂಡೀಷನ್ಸ್‌ನಲ್ಲಿ ಏನು ಇದೆ ? ಅದನ್ನು ಸಭೆಯ ಮುಂದೆ ಒದಗಿಸುವುದಕ್ಕೆ ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಹತ್ತಿರ ಅಗ್ರಿಮೆಂಟ್ ಮತ್ತು ಲೀಸ್ ಕಂಡೀಷನ್ಸ್ ಎಲ್ಲಾ ಇದೆ, ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದರೆ ಬಂದು ಆ ಷರತ್ತುಗಳನ್ನು ನೋಡಬಹುದು.

SHORT NOTICE QUESTION AND ANSWER

Co-operative Appellate Tribunal

(9) Sri J. L. KABADE (Ballolli).—

Will the Minister for Co-operation be pleased to state :—

(a) whether the Government is aware that Co-operative Appellate Tribunal was closed from 12th to 19th February 1973 as one of the members had gone to Calcutta ;